

ಹಿಮಾಂಶಿ ಇಂದುಲಾಲ್ ಶೆಲತ್ (ಜನವರಿ 8, 1947) ಗುಜರಾತಿ ಭಾಷೆಯಲ್ಲಿ ಬರೆಯುವ ಭಾರತದ ಪ್ರಮುಖ ಬರಹಗಾರರಲ್ಲೊಬ್ಬರು. ಸೂರತ್‌ನ ಎಂಟಿಬಿ ಆರ್ಟ್ಸ್ ಕಾಲೇಜಿನಲ್ಲಿ ಪ್ರಾಧ್ಯಾಪಕಿಯಾಗಿ ಕಾರ್ಯ ನಿರ್ವಹಿಸಿ ಸ್ವಯಂ ನಿವೃತ್ತರು. ಹನ್ನೆರಡು ಕಥಾಸಂಕಲನ, ಎರಡು ಕಾದಂಬರಿ, ಎರಡು ನೀಳ್ಗತೆ, ಮೂರು ಸ್ಮೃತಿಗಳು ಹಾಗೂ ಮೂರು ಅನುವಾದಗಳು ಅವರ ಕೃತಿಶ್ರೇಣಿಯಲ್ಲಿ ಮುಖ್ಯವಾದವು. ‘ಮುಕ್ತಿ ವೃತ್ತಾಂತ್’ ಅವರ ಆತ್ಮಕಥೆ. ವಿಮರ್ಶೆ ಹಾಗೂ ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೂ ಅವರ ಕೊಡುಗೆ ಸಂದಿದೆ. ‘ಅಂತರಾಲ್’, ‘ಭೂಮಿ ಸೂಕ್ತ್’, ‘ಆಟ್ಮೊ ರಂಗ್’ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ‘ಅಂಧಾರಿ ಗಲಿಮಾ ಸಫೇದ್ ತಪಕನ್’ ಅವರ ಕೆಲವು ಪ್ರಸಿದ್ಧ ಕೃತಿಗಳು. ‘ರೆಕ್ಕೆಯಿಲ್ಲದ ಹಕ್ಕಿ’ ಹೆಸರಿನಲ್ಲಿ ಹಿಮಾಂಶಿ ಅವರ ಕಥೆಗಳನ್ನು ಅಗ್ರಹಾರ ಕೃಷ್ಣಮೂರ್ತಿ ಅವರು ಕನ್ನಡಕ್ಕೆ ತಂದಿದ್ದಾರೆ. ಈ ಕಥೆಗಳ ಜೊತೆಗೆ ‘ಕುವೆಂಪು ರಾಷ್ಟ್ರೀಯ ಪ್ರಶಸ್ತಿ 2024’ರ ಮೂಲಕ ಹಿಮಾಂಶಿ ಕನ್ನಡದ ಸಹೃದಯರಿಗೆ ಹತ್ತಿರವಾಗಿದ್ದಾರೆ.

ಕಲಿಸಿಕೊಟ್ಟರು. ಮನೆಯ ಕೆಲಸ, ಗುಡಿಸೋದು, ಪಾತ್ರೆ ತೊಳೆಯೋದು ಎಲ್ಲವನ್ನೂ ನಾವು ಮಾಡಬೇಕಿತ್ತು. (ಈ ಮಾತುಗಳನ್ನು ಆಡುತ್ತಿರುವಾಗಲೇ ಸೂರತ್‌ನಿಂದ ಅವರ ಸಹಾಯಕಿ ಸವಿತಾ ಫೋನ್ ಮಾಡಿದರು, ಇವರು ಅವರನ್ನು ಸವಿತಾ ಬೆನ್ ಅಂತಲೇ ಸಂಬೋಧಿಸಿ ಮಾತನಾಡಿದರು). ದೊಡ್ಡ ಪುಸ್ತಕ ಸಂಗ್ರಹ ಇತ್ತು ಅಜ್ಜನ ಮನೇಲಿ. ನಾನಂತೂ ಆಯ್ಕೆಯ ಪರಿವೆಯೇ ಇಲ್ಲದೆ, ಸಮಯ ಸಿಕ್ಕಾಗಲೆಲ್ಲ ಪುಸ್ತಕಗಳನ್ನು ಓದೋದನ್ನ ಅಭ್ಯಾಸ ಮಾಡಿಕೊಂಡಿದ್ದೆ. ಮಕ್ಕಳ ಸಾಹಿತ್ಯ, ಪ್ರಾಣಿಗಳ ಮೇಲಿನ ಪುಸ್ತಕ, ಯಾವುದು ಸಿಗುತ್ತೋ ಅದನ್ನ ಓದ್ತಾ ಇದ್ದೆ. ಬಹುಶಃ ಈ ಕಾರಣಕ್ಕಾಗಿಯೋ ಏನೋ ನನಗೆ ಗೆಳತಿಯರ ಗುಂಪು ಇರಲಿಲ್ಲ. ಇಬ್ಬರೋ ಮೂವರೋ ಮಾತ್ರ ಗೆಳತಿಯರಿದ್ದರು. ಪುಸ್ತಕಗಳೇ ನನ್ನ ಸಂಗಾತಿಗಳು, ಆಗಲೂ ಈಗಲೂ. ಕೆಲವರಿಗಂತೂ ನಾನು ಎಕ್ಸೆಂಟ್ರಿಕ್ ಅಂತಾನೂ ಅನ್ನಿಸ್ತಾ ಇತ್ತು. ಇದ್ದದ್ದನ್ನು ಇದ್ದ ಹಾಗೆ ಹೇಳಿ ಬಿಡ್ತಾ ಇದ್ದೆ.

**◆ ಅಮೃತಾ ಶೇರ್ ಗಿಲ್ ಮೇಲೆ ನೀವು ಬರೆದ ಬಯೋಪಿಕ್ ಮಾದರಿಯ ಕೃತಿಯ ಮೂಲ ಇಲ್ಲಿದೆ ಹಾಗಿದ್ದರೆ...**

ನಿಜ, ನಮ್ಮ ಸ್ಕೂಲಿನಲ್ಲಿ ತುಂಬಾ ಒಳ್ಳೆಯ ಲೈಬ್ರರಿ ಮತ್ತು ಲೈಬ್ರರಿಯನ್ ಇದ್ದರು. ಅವರು ಹೇಳ್ತಾ ಇದ್ದರು, ಪುಸ್ತಕಗಳು ಬೀರುಗಳಿಗಲ್ಲ, ನಿಮಗೆ ಅಂತ ಇರೋದು, ಯಾವಾಗ ಬೇಕಾದರೂ ಬಂದು ಓದಿ ಅಂತ. ನಾನಂತೂ ಓದಿದ್ದೇ ಓದಿದ್ದು. ಆಗಲೇ ನನಗೆ ಅಮೃತಾ ಅವರ ಪೇಂಟಿಂಗ್ಸ್, ಅವರ ಮೇಲಿನ ಬರಹಗಳು ಎಲ್ಲಾ ಓದೋದಿಕ್ಕೆ ಸಿಕ್ಕಿದವು. ಆಗ ನಾನು ಮುಂದೆ ಯಾವತ್ತಾದರೂ ಆಕೆಯನ್ನು ಕುರಿತ ಕಲ್ಪನೆಯೂ ಬೆರೆತ ಕೃತಿಯೊಂದನ್ನು ಬರೀತೀನಿ ಅನ್ನುವ ಕಲ್ಪನೆಯೂ ಇರಲಿಲ್ಲ. ಅದೆಷ್ಟೊಂದು ಕಾರಣಗಳಿಗಾಗಿ ಅಮೃತಾ ನನಗೆ ಪ್ರಿಯ ಅನ್ನುವುದನ್ನು ಸ್ವಲ್ಪದರಲ್ಲಿ ಹೇಳೋದು ಕಷ್ಟ. ಅನೇಕ ವಿಷಯಗಳಲ್ಲಿ ಆಕೆ ಮೊದಲಗಿತ್ತಿ. ರವೀಂದ್ರನಾಥ್ ಮತ್ತು ಅವನೀಂದ್ರನಾಥ್ ಟ್ಯಾಗೋರ್ ಪರಂಪರೆಯನ್ನು ಅಲ್ಲಿಯ ತನಕ ಯಾರೂ ಪ್ರಶ್ನೆ ಮಾಡಿರಲಿಲ್ಲ. ಮೊದಲ ಬಾರಿ ಅಮೃತಾ ಅವರನ್ನು ಪ್ರಶ್ನೆ ಮಾಡಿದರು, ವಿರೋಧಿಸಿದರು.

**◆ ಆಕೆಯ ಪರಿಸರವೂ ನಿಮ್ಮ ಪರಿಸರದಷ್ಟೇ ಮುಕ್ತವೂ, ಆಧುನಿಕವೂ ಆಗಿತ್ತಲ್ಲವೆ? ಆಕೆಯ ತಂದೆ ತಾಯಿಯರದ್ದೂ ಅಂತರ್ದೇಶೀಯ, ಅಂತರ್ಧರ್ಮೀಯ ಮದುವೆ.**

ಅದೇನೋ ಹೌದು, ಆಕೆ ಓದಿದ್ದು ಪ್ಯಾರಿಸ್ ಚಿತ್ರಕಲಾ ಶಾಲೆಯಲ್ಲಿ. ಅದು ಮೂಲತಃ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ದೃಷ್ಟಿಕೋನದ್ದು. ಆದರೂ ಆಕೆಯ ತೀರ್ಮಾನಗಳ ಬಗೆಗೆ, ಬದುಕಿನ ಬಗೆಗೆ ಆಕೆಯ ತಂದೆ ತಾಯಿಯರಿಂದಲೂ ಆಕೆ ತುಂಬಾ ವಿರೋಧವನ್ನು ಎದುರಿಸಿದರು. ತೆಗೆದುಕೊಂಡ ತೀರ್ಮಾನಗಳ ಕಾರಣಕ್ಕಾಗಿಯೂ ಆಕೆ ಹಲವು ಸವಾಲುಗಳನ್ನು ಎದುರಿಸಬೇಕಾಯಿತು. ಒಂದು ರೀತೀಲಿ ಬೊಹೆಮಿಯನ್ ರೀತಿಯ ಬದುಕು ಆಕೆಯದು. ಇಷ್ಟಾಗಿ ಆಕೆ ತನ್ನ ಬದುಕನ್ನು ತನಗೆ ಬೇಕಾದ ಹಾಗೆ ಬದುಕಿದರಲ್ಲ, ಆ ಗಟ್ಟಿತನಕ್ಕೆ ಸಲಾಂ.

ಅವರ ಪೇಂಟಿಂಗ್ಸ್‌ಗಳಲ್ಲೆಲ್ಲ ನನ್ನ ಗಮನ ಸೆಳೆಯೋದು ಅವರು ಮನುಷ್ಯರ ಕಣ್ಣುಗಳನ್ನು ಚಿತ್ರಿಸುವ ರೀತಿ. ಆಳವಾದ ದುಃಖದಲ್ಲಿ ಅದ್ದಿದಂತಿರುವ ಕಣ್ಣುಗಳನ್ನು ಅವರಂತೆ ಮತ್ತಾರೂ ಚಿತ್ರಿಸಲಾರರು ಅನ್ನಿಸುತ್ತದೆ ನನಗೆ. ತುಂಬಾ ಸಂಕಟಮಯವಾದ ಬದುಕನ್ನು ಆಕೆ ಧೀರವಾಗಿ ಎದುರಿಸಿದರು.

**◆ ನಿಮ್ಮ ಬಲು ಚರ್ಚಿತ ಕೃತಿ ‘ಪ್ಲಾಟ್ ಫಾರಂ 4’ರ ಬಗ್ಗೆ ಹೇಳಿ.**

ಆರಂಭದಿಂದಲೂ ನನಗೆ ಸಮಾಜಮುಖಿಯಾಗಿ ಏನಾದರೂ ಮಾಡಬೇಕು ಅಂತಿತ್ತು. ಆದಿವಾಸಿಗಳ ಬಗ್ಗೆ ಕೆಲಸ ಮಾಡಬೇಕು ಅಂತಿತ್ತು. ಆದ್ದರಿಂದಲೇ ಮದುವೆ ಕೂಡ ನನ್ನ ಆದ್ಯತೆಯಾಗಿರಲಿಲ್ಲ.